## ಬಂಟ್ವಾಳ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ.

ಸಿ ಸಿ ನಂ. : 220/2020 ಸಿಡಬ್ಲ್ಯೂ : 2

ಪಿಡಬ್ಲ್ಯೂ : 2

ಹೆಸರು : ಸೋಮಶೇಖರ

ತಂದೆಯ ಹೆಸರು : ಭೀಮಲಿಂಗಪ್ಪ

ವಯಸ್ಸು : 38 ವರ್ಷ

ಉದ್ಯೋಗ : ಖಾಸಗಿ ಉದ್ಯೋಗಿ

ವಾಸಸ್ಥಳ : ಪಾಲೆದಡಿ ಮನೆ ಅಜ್ಜಿಬೆಟ್ಟು ಬಂಟ್ವಾಳ ತಾಲೂಕು

ದಿ: 22.02.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ಈ ಪ್ರಕರಣದ ಪಿರ್ಯಾದಿದಾರರಾದ ಸಂಧ್ಯಾ ನನ್ನ ಹೆಂಡತಿ. ಆರೋಪಿಯ ಪರಿಚಯ ಇದೆ. ದಿನಾಂಕ 29.08.2019 ರಂದು ನಾನು ಮನೆಯಲ್ಲಿರುವ ಸಮಯದಲ್ಲಿ 9325735987 ಮೊಬೈಲ್ ನಂಬರಿನಿಂದ ನನ್ನ ಮೊಬೈಲ್ ನಂಬರ್ 9480244317 ನನ್ನ ಪತ್ನಿ ಬೇರೊಬ್ಬನ ಜೊತೆ ಇರುವ 10-15 ಪೋಟೋ ಗಳನ್ನು ಕಳುಹಿಸಲಾಗಿತ್ತು. ಆ ಬಗ್ಗೆ ನನ್ನ ಹೆಂಡತಿಯಲ್ಲಿ ವಿಚಾರಣೆ ಮಾಡಿದಾಗ ಆಗ ಶೇರ್ ಚ್ಯಾಟ್ ನಲ್ಲಿ ಪರಿಚಯವಾದ ಬಿಜಾಪುರ ಮೂಲದ ಮಂಜುನಾಥ ಎಂಬಾತ ಬೆಂಗಳೂರಿನಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದು ಆತನೊಡನೆ ಪರಿಚಯ ಆಗಿದ್ದು ಫೋನ್ ನಲ್ಲಿ ಮಾತನಾಡಿಕೊಂಡಿದ್ದೆವು. ಮೆಸೇಜ್ ಸಹ ಮಾಡುತ್ತಿದ್ದ ಎಂದು ತಿಳಿಸಿದಳು. ಅವರು ಜೂನ್ 2019 ರಲ್ಲಿ ಮಂಗಳೂರಿಗೆ ಬಂದ ಸಮಯದಲ್ಲಿ ಕೆಲವೊಂದು ಪೋಟೋ ವಿಡಿಯೋ ತೆಗೆದುಕೊಂಡಿದ್ದನು. ಅವುಗಳನ್ನು ಡಿಲೀಟ್ ಮಾಡು ಎಂದು ನಾನು ಹೇಳಿದ್ದೆ ಆತ ಡಿಲೀಟ್ ಮಾಡಿದ್ದೇನೆ ಎಂದು ತಿಳಿಸಿದ್ದನು ಎಂಬುದಾಗಿ ನನ್ನ ಹೆಂಡತಿ ಹೇಳಿದ್ದಳು.

ತದನಂತರ ಅದು ತಪ್ಪು ಎಂದು ತಿಳಿದು ಅವನಿಂದ ದೂರವಾಗಿದ್ದು ಕಾಲ್ ಮಾಡಿದಾಗಲೂ ರಿಸೀವ್ ಮಾಡಿರಲಿಲ್ಲ, ಮೆಸೇಜ್ ಮಾಡಿದಾಗ ರಿಪ್ಲೆ ಮಾಡಿರಲಿಲ್ಲ. ಅದೇ ದ್ವೇಷದಿಂದ ಪೋಟೋಗಳನ್ನು ನಿಮ್ಮ ಮೊಬೈಲಿಗೆ ಕಳಿಸಿದ್ದಾನೆ ಎಂದು ಹೇಳಿದ್ದಳು. ಅದನ್ನು ಕೇಳಿದ ನಂತರ ಅದೇ ನಂಬರಿಗೆ ನಾನು ಖುದ್ದಾಗಿ ಫೋನ್ ಮಾಡಿ ಪೋಟೋ ಮತ್ತು ವಿಡಿಯೋವನ್ನು ಡಿಲೀಟ್ ಮಾಡುವಂತೆ ಹೇಳಿದ್ದೇನೆ. ಅದಕ್ಕೆ ಆರೋಪಿತನು ಕಿವಿಕೊಡದೇ ವಿಷ್ಣು ಜೆ ಎಂಬ ಫೇಸ್ ಬುಕ್ ಮತ್ತು

ವಾಟ್ಸಾಪ್ ಖಾತೆಗೆ ಫೋಟೋಗಳನ್ನು ವಿಡಿಯೋ ಸಮೇತ ಜಾಲತಾಣದಲ್ಲಿ ಪ್ರಚುರಪಡಿಸಿದ್ದ. ನನಗೆ, ನನ್ನ ಹೆಂಡತಿಗೆ ಸೂಳೆ ಎಂಬುದಾಗಿ ಮತ್ತು ನನ್ನ ಕುಟುಂಬಕ್ಕೆ ಅವಾಚ್ಯ ಶಬ್ದಗಳಿಂದ ಬೈದ ವಿಚಾರವಾಗಿ ಜಾಲತಾಣಗಳಲ್ಲಿ ಪ್ರಚುರಪಡಿಸಿದ್ದ.

ದಿನಾಂಕ 05.10.2019 ರಂದು ಫೇಸ್ ಬುಕ್ ಖಾತೆ ವಿಷ್ಣು ಜಿ ಎಂಬ ಹೆಸರಿನಲ್ಲಿ ಅಶ್ಲೀಲ ಅಸ್ಪಷ್ಟ ಚಿತ್ರಗಳನ್ನು ಹಾಕಿ **"full clear video uploaded in 3 days"** ಎಂದು ಹಾಕಿದ್ದ. ಸದರಿ ಮೆಸೇಜ್ ಇರುವ ನನ್ನ ಮೊಬೈಲನ್ನು ಪುಂಜಾಲಕಟ್ಟೆ ಪೊಲೀಸ್ ಠಾಣೆಗೆ 08.11.2019 ರಂದು ಬೆಳಿಗ್ಗೆ 11.00 ರಿಂದ 12.00 ಗಂಟೆಗೆ ಪೊಲೀಸರ ಮುಂದೆ ಹಾಜರುಪಡಿಸಿದ್ದೆ. ಆ ಸಮಯದಲ್ಲಿ ಶಂಕರ ಶೆಟ್ಟಿ ಚಾಸಾ-4, ಉಮೇಶ್ ಪೂಜಾರಿ ಯವರು ಇದ್ದರು. ಸದರಿ ಮೊಬೈಲ್ ಸ್ಯಾಂ ಸಂಗ್ ಕಂಪನಿಯದು ಇದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಮೊಬೈಲ್‌ನ್ನು ಈಗಾಗಲೇ ಎಂ ಒ 1 ಎಂದು ಗುರುತಿಸಲಾಗಿದೆ.

ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ ಅದು ಸ್ವತ್ತು ಸ್ವಾಧೀನತಾ ಮಹಜರಾಗಿದ್ದು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ-2 ಎಂದು ಸಾಕ್ಷಿ ಸಹಿ ನಿಪಿ-2 ಎ ಎಂದು ಗುರುತಿಸಲಾಯಿತು. ಸದರಿ ಮಹಜರು ಸಮಯ ಪೊಲೀಸರು ಮೊಬೈಲನ್ನು ವಶಕ್ಕೆ ತೆಗೆದುಕೊಂಡಿದ್ದಾರೆ. ಘಟನೆ ಆದಂತಹ ಸಮಯದಲ್ಲಿ ನನ್ನ ಹೆಂಡತಿ ಮಂಗಳೂರಿನಲ್ಲಿ ಕೆಲಸಕ್ಕೆ ಹೋಗಿ ಬರುತ್ತಿದ್ದಳು. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿತನು ನನ್ನ ಮೊಬೈಲಿಗೆ ಕಳುಹಿಸಿದ ಫೋಟೋ ಮತ್ತು ವಿಡಿಯೋಗಳನ್ನು ನೋಡಿದರೆ ಗುರುತಿಸುತ್ತೇನೆ.

ಮುಂದುವರಿದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು.

ನ ಉ ರೀ ಬ ನ್ಯಾ ಬೆ ಮಾಡಲಾಯಿತು.

ಓ ಹೇ ಕೇ ಸ ಇದೆ.

**ಹಿರಿಯಸಿವಿಲ್‌ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ಬಂಟ್ವಾಳ.**